# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **670** |
| ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ್ ಅರಳಿ<br>(ವಿಧಾನಸಭೆಯಿಂದ ಚುನಾಯಿತರು) |
| ಉತ್ತರಿಸುವ ದಿನಾಂಕ | : | 23-12-2022 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯಲ್ಲಿ 2018-19 ರಿಂದ 2020-21 ರವರೆಗೆ ಫಸಲ್ ಭೀಮಾ ಯೋಜನೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br>ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ರಾಜ್ಯದಲ್ಲಿ ಬೀದರ್ ಜಿಲ್ಲೆಯು 2018-19 ರಿಂದ 2020-21 ರವರೆಗೆ ಬೆಳೆ ವಿಮೆ ನೋಂದಣಿಯಲ್ಲಿ ಪ್ರಥಮ ಸ್ಥಾನದಲ್ಲಿರುತ್ತದೆ. |
| ಆ) | ಈ ಯೋಜನೆಯಲ್ಲಿ ವಿಮೆ ಕಂಪನಿ ಈ ಸಾಲಿನಲ್ಲಿ ಸುಮಾರು ರೂ.198 ಕೋಟಿ ಲಾಭಗಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಈ ಯೋಜನೆಯಡಿ ಕಂಪನಿಗಾಗುವ ಲಾಭದ ಮಾಹಿತಿ ಲಭ್ಯವಿರುವುದಿಲ್ಲ.<br><br>ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು ಅನುಷ್ಠಾನಗೊಳಿಸಲು ಖಾಸಗಿ ಸಂಸ್ಥೆಗಳಷ್ಟೇ ಅಲ್ಲದೆ |
| ಇ) | ಬಂದಿದ್ದಲ್ಲಿ, ಈ ವಿಮೆ ಯೋಜನೆಯನ್ನು ಸರ್ಕಾರವೇ ಸ್ವತ: ಮುಂದುವರಿಸಬಾರದೇಕೆ; ಇದರ ಪ್ರಯೋಜನ ಪಡೆಯಲು ಸರ್ಕಾರ ಕ್ರಮವಹಿಸುವುದೆ? | ಸರ್ಕಾರಿ ಸಾಮ್ಯದ ಸಂಸ್ಥೆಗಳನ್ನು ಸಹ ಕೇಂದ್ರ ಸರ್ಕಾರವು ಎಂಪ್ಯಾನೆಲ್ ಮಾಡಿರುತ್ತದೆ. ರಾಜ್ಯದಲ್ಲಿ ಸದರಿ ಸಂಸ್ಥೆಗಳಿಗೆ ಟೆಂಡರ್ ಕರೆದು ನಿರ್ದಿಷ್ಟ ಮಾನದಂಡಗಳನ್ನು ಪೂರೈಸಿದ ಸಂಸ್ಥೆಗಳನ್ನು ಮಾತ್ರ ಯೋಜನೆಯ ಅನುಷ್ಠಾನಕ್ಕಾಗಿ ಆಯ್ಕೆ ಮಾಡಲಾಗುತ್ತದೆ. ಈ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸುತ್ತಿರುವ ವಿಮಾ ಸಂಸ್ಥೆಗಳು ಇಡೀ ದೇಶದ ವಿವಿಧ ರಾಜ್ಯಗಳಲ್ಲಿಯೂ ಅನುಷ್ಠಾನಗೊಳಿಸುತ್ತಿರುತ್ತವೆ.<br><br>ಸರ್ಕಾರವೇ ರೈತರಿಂದ ಪ್ರೀಮಿಯಂ ಅನ್ನು ಪಡೆದು ವಿಮಾ ಪರಿಹಾರ ಇತ್ಯರ್ಥಪಡಿಸುವಲ್ಲಿ ಸಂಭವಿಸಬಹುದಾದಂತಹ ಸಾಧ್ಯಾ-ಸಾಧ್ಯತೆಗಳನ್ನು ಸಹ ಅಧ್ಯಯನ ಮಾಡಲಾಗುತ್ತಿದೆ. |

*ಸಂಖ್ಯೆ: ಕೃಇ 104 ಕೃಉಇ 2022*

(ಬಿ.ಸಿ.ಪಾಟೀಲ್)
ಕೃಷಿ ಸಚಿವರು